ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.

ಮೂಲ ದಾವೆ ನಂ. 117/2019

ಪಿ.ಡಬ್ಲ್ಯೂ.1

ದಿನಾಂಕಃ 19.07.2022

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಯರ ಪರವಾಗಿ ಶ್ರೀ. ಬಿ.ಆರ್. ವಕೀಲರಿಂದ

3. ಈ ದಾವೆಯನ್ನು ನಾವು 3 ಜನ ಅಣ್ಣ ತಮ್ಮಂದಿರು ಸೇರಿ ಸಲ್ಲಿಸಿರುತ್ತೇವೆ. ನಾನು ದೊಡ್ಡ ಹೈಯಾಳಪ್ಪ, ನನ್ನ ತಮ್ಮ ಸಣ್ಣ ಹೈಯಾಳಪ್ಪ, ನನ್ನ ಇನ್ನೊಬ್ಬ ಸಹೋದರ ರಂಗಪ್ಪ ಸೇರಿ ದಾಖಲಿಸಿರುತ್ತೇವೆ. ಸಾಕ್ಷಿ ಸ್ವತಃ ಮುಂದುವರೆದು ಆ ಎರಡು ಜನರು ನನ್ನ ಚಿಕ್ಕಪ್ಪನ ಮಕ್ಕಳಾಗಿರುತ್ತಾರೆ ಎಂದು ಹೇಳುತ್ತಾರೆ. ಸಣ್ಣ ಹೈಯಾಳಪ್ಪ ಮತ್ತು ರಂಗಪ್ಪ ಇವರು ಹಣಮಂತ ಇವರ ಮಕ್ಕಳಾಗಿರುತ್ತಾರೆ. ಸದರಿ ಹಣಮಂತ ಇವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು ಅವರ ಹೆಸರು ಅಯ್ಯಮ್ಮ ಮತ್ತು ದೇವಮ್ಮ ಎಂದು ಇರುತ್ತದೆ. ಅಯ್ಯಮ್ಮ ಈಗ ಮರಣಹೊಂದಿರುತ್ತಾರೆ. ದೇವಮ್ಮ ಬದುಕಿರುತ್ತಾರೆ. ಮೃತ ಅಯ್ಯಮ್ಮಳಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರ ಹೆಸರು ಹರಿಶ ಮತ್ತು ಶರಣಬಸಪ್ಪ ಎಂದು ಇರುತ್ತದೆ.

4. ನನ್ನ ತಂದೆಯ ಹೆಸರು ನಿಂಗಪ್ಪ ಎಂದು ಇರುತ್ತದೆ. ನಮ್ಮ ತಂದೆಗೆ ನಾವು ಇಬ್ಬರು ಮಕ್ಕಳು. ನಾನು ಮತ್ತು ನಮ್ಮ ತಂಗಿ ಅಯ್ಯಮ್ಮ. ನನ್ನ ತಂಗಿ ಅಯ್ಯಮ್ಮ ಮರಣಹೊಂದಿರುತ್ತಾರೆ. ಅವರ ಇಬ್ಬರು ಮಕ್ಕಳು ಇರುತ್ತಾರೆ ಅವರ ಹೆಸರು ಸಹ ಹರಿಶ ಮತ್ತು ಶರಣಬಸಪ್ಪ ಎಂದು ಇರುತ್ತದೆ.

5. ಈ ದಾವೆಯನ್ನು ನಾವು ಹರಿಶಚಂದ್ರ ಮತ್ತು ಬಿ.ಕೆ. ಎನ್ನುವವರ ವಿರುದ್ಧ ಸಲ್ಲಿಸಿರುತ್ತೇವೆ. ದಾವಾ ಆಸ್ತಿಗಳ ಸರ್ವೆ ನಂ. 167 ಮತ್ತು 168 ಅಂತಾ ಇರುತ್ತವೆ. ಈ ಜಮೀನುಗಳು ವಡಗೇರಾ ಸೀಮೆಯಲ್ಲಿ ಇರುತ್ತವೆ. ನನ್ನ ಊರು ಯಕ್ಷಚಂತಿ ಇರುತ್ತದೆ. ನನ್ನ ಊರಿನಿಂದ ವಡಗೇರಾ ಅಂದಾಜು 40 ಕಿ.ಮೀ. ದೂರದಲ್ಲಿ ಇರುತ್ತದೆ. ನನ್ನ ಊರಲ್ಲಿ ನನಗೆ ಒಂದು ಎಕರೆ ಜಮೀನು

ಇರುತ್ತದೆ. ಮರಿಲಿಂಗಪ್ಪ ಎನ್ನುವವ ನನ್ನ ಸ್ವಂತ ಮಗನಿರುತ್ತಾನೆ. ನನ್ನ ಮಗ ಮರಿಲಿಂಗಪ್ಪ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ ಕಛೇರಿಯಲ್ಲಿ ಅರ್ಜಿ ಸಲ್ಲಿಸಿದ್ದ. ಆ ಅರ್ಜಿಯಲ್ಲಿ ಹಣಮಂತಪ್ಪ ತಂದೆ ಹೈಯಾಳಪ್ಪ ಇವರು ದಿಃ 28.09.2017 ರಂದು ಮರಣಹೊಂದಿರುತ್ತಾನೆ ಎಂದು ಹೇಳಿ ಬರೆದಿರುತ್ತಾನೆ ಅಂದರೆ ಸಾಕ್ಷಿಯು ಹಾಗೆ ಬರೆದಿರುವುದು ಸರಿ ಇರುತ್ತದೆ ಎಂದು ಹೇಳುತ್ತಾರೆ. ನನ್ನ ತಂದೆ ನಿಂಗಪ್ಪ ಈಗ ೫ ವರ್ಷಗಳ ಹಿಂದೆ ಮರಣಹೊಂದಿರುತ್ತಾನೆ.

ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.